ಚಾಕಚಕ್ಯತೆಯನ್ನು ಯಂತ್ರಗಳಿಗೆ ಕಲಿಸುವವರು ಮತ್ತು ರಮ್ಯ ಭ್ರಮಾಲೋಕ ಸೃಷ್ಟಿಸುವವರು – ಇವರೆಲ್ಲ ಸೇರಿಕೊಂಡು ಎಐ ಗೆಳತಿಯರನ್ನು ನಿರ್ಮಿಸುತ್ತಾರೆ. ಲಭ್ಯವಿರುವ ಇಂಟರ್‌ನೆಟ್ ಬಳಸಿಕೊಂಡು ತಮ್ಮ ಹಿಂಬಾಲಕರನ್ನು ಮನರಂಜಿಸುವ ಅನೇಕರನ್ನು ನಾವು ನಿತ್ಯ ಕಾಣುತ್ತೇವೆ.

'ಸ್ನ್ಯಾಪ್‌ಚಾಟ್' ವೇದಿಕೆಯಲ್ಲಿ 18 ಲಕ್ಷ ಹಿಂಬಾಲಕರನ್ನು ಸಂಪಾದಿಸಿರುವ ಕರಿನ್ ಮರ್ಜೋರೈ ಎಂಬಾಕೆ ತನ್ನದೇ 'ಎಐ ವಾಚಸ್ಪತಿ' ಕರಿನ್‌ಳನ್ನು ಸೃಷ್ಟಿಸಿ, ಏಕಾಂಗಿತನ ಇಲ್ಲವಾಗಿಸುವ ಸಖಿಯಂತೆ ಕೆಲಸ ಮಾಡಿಸುವಲ್ಲಿ ಯಶಸ್ವಿಯಾಗಿದ್ದಾಳೆ. 'ವರ್ಚುವಲ್ ಗರ್ಲ್‌ಫ್ರೆಂಡ್' ಎಂದೇ ಖ್ಯಾತಿಗಳಿಸಿರುವ ಕರಿನ್ ಎಐ, ಕೋವಿಡ್ ಪಿಡುಗಿನ ಸಮಯದಲ್ಲಿ ಆಘಾತಕ್ಕೊಳಗಾದ ಅನೇಕರಿಗೆ ಸಾಂತ್ವನ ಹೇಳುವಲ್ಲಿ ಯಶಸ್ವಿಯಾಗಿದೆ ಎಂಬ ವರದಿಗಳಿವೆ. ಅದು ಎಷ್ಟು ಜನಪ್ರಿಯತೆ ಗಳಿಸಿದೆಯೆಂದರೆ, 'ಕರಿನ್ ಎಐಯನ್ನು ಮಾರುಕಟ್ಟೆಯಿಂದ ಈ ಕೂಡಲೇ ಹಿಂಪಡೆಯದಿದ್ದರೆ ಕೊಲೆ ಮಾಡಿಬಿಡುತ್ತೇವೆ' ಎಂಬ ಬೆದರಿಕೆಯ ಕರೆಗಳು ಕರಿನ್ ಮರ್ಜೋರೈಗೆ ಬರತೊಡಗಿವೆ. ಕರಿನ್ ರೀತಿಯ ವಾಚಸ್ಪತಿಗಳ ಅಗತ್ಯದ ಬಗ್ಗೆ ನೈತಿಕತೆಯ ಚರ್ಚೆಗಳಾಗುವುದೇನೋ ಸರಿ. ಆದರೆ, ಇದು ಎಐ ಆಧಾರಿತ ವಾಚಸ್ಪತಿ ಆಗಿರುವುದರಿಂದ ಬಳಕೆದಾರರು ಏನು ಕೇಳುತ್ತಾರೆ, ಕರಿನ್ ಎಐ ಏನನ್ನು ನೀಡುತ್ತದೆ ಎಂಬುದರ ಮೇಲೆ ಅದರ ಮಾಲೀಕಳಿಗೆ ಯಾವ ಹತೋಟಿಯೂ ಇಲ್ಲ.

## ಬಟಾಬಯಲಿನಲ್ಲಿ ಅಗಾಧ ದತ್ತಾಂಶ

ಮಾರುಕಟ್ಟೆಯಲ್ಲಿ ಲಭ್ಯವಿರುವ ಎಲ್ಲ ಎಐ ವಾಚಸ್ಪತಿಗಳು ಬಳಕೆದಾರರಿಂದ ಭಾರೀ ಪ್ರಮಾಣದ ದತ್ತಾಂಶ ಸಂಗ್ರಹಿಸುತ್ತವೆ. ಓಪನ್ ಎಐ ಕಂಪನಿಯ ಅತ್ಯಂತ ಜನಪ್ರಿಯ ಚಾಟ್ ಜಿಪಿಟಿ ಮತ್ತು ಗೂಗಲ್‌ನ ಜೆಮಿನಿಗಳೂ ಇದಕ್ಕೆ ಹೊರತಲ್ಲ. ಯಾವುದೇ ಎಐ ಉತ್ಪನ್ನದ ಕಂಪನಿಯು ಅಗಾಧ ಪ್ರಮಾಣದ ದತ್ತಾಂಶ ಸಂಗ್ರಹಿಸುವಲ್ಲಿ ನಿರತವಾಗಿವೆ. ಬಳಕೆದಾರರು ನೀಡುವ ದತ್ತಾಂಶಗಳನ್ನು ಅಡ್ವರ್ಟೈಸಿಂಗ್ ಟೈಸಿಂಗ್ ಕಂಪನಿಗಳಿಗೆ ಮಾರಾಟ ಮಾಡುವ ಬಹುತೇಕ ಎಐ ಕಂಪನಿಗಳು, ಜನರ ಖಾಸಗೀತನಕ್ಕೆ ಧಕ್ಕೆ ತರುತ್ತವೆ ಎನ್ನಲಾಗಿದೆ. ಅದಲ್ಲದೆ, ಅವರ ಖಾಸಗೀತನಕ್ಕೆ ಸಂಬಂಧಿಸಿದ ನೀತಿನಿಯಮ, ರೂಪುರೇಷೆಗಳು ಬಹುತೇಕ ಅಜ್ಞಾತವಾಗಿಯೇ ಇರುತ್ತವೆ. ಒಂದು ಎಐ ಮೂಲಕ ಗಳಿಸಿಕೊಂಡ ದತ್ತಾಂಶವನ್ನು ಬೇರೊಂದು ಹೊಸ ಎಐ ಉತ್ಪನ್ನ ತಯಾರಿಸಲು ಬಳಸಲಾಗುತ್ತದೆ; ಇಲ್ಲವೇ ಈಗಾಗಲೇ ಕೆಲಸ ಮಾಡುತ್ತಿರುವ ಎಐ ಉತ್ಪನ್ನಕ್ಕೆ ನೀಡಲಾಗುತ್ತದೆ. ಇದು ಭದ್ರತೆಯ ಕುರಿತು ನಿಜವಾದ ಆತಂಕ ಹುಟ್ಟು ಹಾಕಿದೆ. ಯಾವುದೇ ಅನಗತ್ಯ ವಿಚಾರಗಳನ್ನು ಪ್ರಚೋದಿಸದ, ಉತ್ತರಿಸದ ಎಷ್ಟೋ ಎಐ ವಾಚಸ್ಪತಿಗಳು ಮಾರುಕಟ್ಟೆಯಲ್ಲಿವೆ. ಇವುಗಳ ಮೇಲೆಯೂ ವಿನಾಕಾರಣ ಆಪಾದನೆಗಳು ಬರುತ್ತಿವೆ.

ವ್ಯಕ್ತಿಯ ವಿವರಗಳು, ಲೈಂಗಿಕ ಆದ್ಯತೆಗಳು ಮತ್ತು ಭಾವನಾತ್ಮಕ ಅಗತ್ಯ ಮತ್ತು ಪ್ರವೃತ್ತಿಗಳ ಬಗ್ಗೆಯೂ ಇಂಚಿಂಚೂ ದತ್ತಾಂಶ ಪಡೆದುಕೊಳ್ಳುವ ಎಐ ವಾಚಸ್ಪತಿಗಳು ಜನರ ಖಾಸಗೀ ವಿಚಾರಗಳನ್ನು ಜಗಜ್ಜಾಹೀರುಗೊಳಿಸಿ, ನಿಜ ಜೀವನದಲ್ಲಿ ವ್ಯಕ್ತಿಗಳನ್ನು ಅಪಾಯಕ್ಕೆ ದೂಡುವ

### ಆಕ್ರಮಣ, ಕುಚೇಷ್ಟೆ, ಪರಿಹಾಸ್ಯ

ಎಐ ಗೆಳತಿಯರನ್ನು ಬಳಸುವ ಬಹುತೇಕರು ಮೊದ ಮೊದಲು ಅತ್ಯಂತ ಅಸ್ವಾಭಾವಿಕ, ಅಸಾಧ್ಯವಾದ ಕೆಲಸಗಳನ್ನೇ ಬಾಟ್‌ಗಳಿಗೆ ಹೇಳುತ್ತಾರೆ ಎಂಬ ಅಧ್ಯಯನ ವರದಿಗಳಿವೆ. ಅಸಭ್ಯವಾಗಿ ಮಾತನಾಡು, ಬೈಗುಳದ ಮಾತನಾಡು, ಅಸಭ್ಯ ಚಿತ್ರ ತೋರಿಸು ಎಂಬೆಲ್ಲ ಬೇಡಿಕೆಗಳೇ ಮೊದ ಮೊದಲು ಹೇರಳವಾಗಿರುತ್ತವೆ. ಬಳಕೆದಾರನ ಇಂಥ ಪ್ರಶ್ನೆ, ಕೋರಿಕೆಗಳನ್ನು ಆರಂಭದಲ್ಲಿ ಮನ್ನಿಸದ ಎಐ ಗೆಳತಿಯರು ಕ್ರಮೇಣ 'ಇವನ ಬಾಳು ಇಷ್ಟೇ' ಎಂದರಿತು ತಾಳಕ್ಕೆ ತಕ್ಕಂತೆ ಕುಣಿತ ಶುರುಮಾಡುತ್ತವೆ. ಬಳಕೆದಾರ ಏನು ಕೇಳುತ್ತಾನೋ ಅದಕ್ಕೆ ಪೂರಕವಾಗಿ ನೀವು ವರ್ತಿಸಬೇಕು ಎಂದವುಗಳಿಗೆ ಮೊದಲೇ ತಾಕೀತು ಮಾಡುವ ಕ್ರಮಾವಳಿ ಬರೆಯುವುದರಿಂದ ಅವು ಸುಲಭವಾಗಿ ಶರಣಾಗುತ್ತವೆ.

ವಾಸ್ತವ ಜೀವನದಲ್ಲಿ ಗಂಡು ಹೆಣ್ಣಿನ ಕೈ ಮುಟ್ಟಲು, ಅಪ್ಪಲು, ಮುದ್ದಿಸಲು, ಲೈಂಗಿಕ ಚಟುವಟಿಕೆ ನಡೆಸಲು, ಮುಖದ ಮೇಲೆ ಇಳಿಬಿದ್ದ ಕೂದಲನ್ನು ಸರಿಪಡಿಸಲು, ಅಂದ ಹೊಗಳಲು – ಹೀಗೆ ಎಲ್ಲದಕ್ಕೂ ಒಪ್ಪಿಗೆ ಬೇಕಾದ ಸನ್ನಿವೇಶದಲ್ಲಿ ನಾವಿದ್ದೇವೆ. 'ನೋ ಮೀನ್ಸ್ ನೋ' (No Means No) ಎಂಬ ವಾಕ್ಯ ಹಲವು ಕೆಲಸಗಳನ್ನು ಸಂಪೂರ್ಣವಾಗಿ ನಿಷೇಧಿಸುತ್ತದೆ. ಈಗಾಗಲೇ ಲೈಂಗಿಕವಾಗಿ ಹಲವು ವಿಧಾನಗಳಲ್ಲಿ ಶೋಷಣೆಗೊಳಗಾಗುತ್ತಿರುವ ಮಹಿಳೆಯರು ನ್ಯಾಯಕ್ಕಾಗಿ, ಸಮಾನ ಅವಕಾಶಕ್ಕಾಗಿ ಅವಿರತ ಹೋರಾಡುತ್ತಿರುವಾಗ, ಯಂತ್ರದ ಸಖ್ಯದಲ್ಲಿ ನಡೆಯುತ್ತಿರುವ ಸ್ವಚ್ಛಂದತೆ, ಅತಿರೇಕಗಳು ಸಮಾಜದ ಸ್ವಾಸ್ಥ್ಯವನ್ನು ಹದಗೆಡಿಸುವುದರಲ್ಲಿ ಅನುಮಾನ ಬೇಕಿಲ್ಲ. ಯಂತ್ರಗಳನ್ನು ಪರಿಹಾಸ್ಯ ಮಾಡಿದಂತೆ, ರೇಗಿಸಿದಂತೆ, ಅವಮಾನಿಸಿದಂತೆ, ಹಿಂಸಿಸಿದಂತೆ ವರ್ತಿಸುವ ಜನ ನೈಜ ಜೀವನದಲ್ಲೂ ಅದನ್ನೇ ಪ್ರಯೋಗಿಸಲಾರಂಭಿಸಿದರೆ ಗತಿ ಏನು?

